JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ದಲಿತ ಆತ್ಮ ಕಥೆಗಳು ಒಂದು ಅವಲೋಕನ

**ಡಾ. ಮಂಜುನಾಥ ಹೆಚ್**
**ಸಹಾಯಕ ಪ್ರಾಧ್ಯಾಪಕರು**
**ಸರ್ಕಾರಿ ಪ್ರಥಮದರ್ಜೆ ಕಾಲೇಜು. ಮಧುಗಿರಿ**
**ತುಮಕೂರು ಜಿಲ್ಲೆ.**

ಭಾರತದ ಯಾವುದೇ ಭಾಷೆಯಲ್ಲಿ ಬಂದ ಸಾಂಪ್ರದಾಯಿಕವಾದ ಆತ್ಮ ಕಥೆಗಳಿಗಿಂತಲೂ ದಲಿತ ಆತ್ಮಕಥೆಗಳು ಅನಾವರಣಗೊಳಿಸುವ ಲೋಕ ಮೀಮಾಂಸೆಯು ಭಿನ್ನವಾದುದು. ಸಮಾಜದಲ್ಲಿ ಅಮುಖ್ಯವೆನ್ನಿಸಿಕೊಂಡಿದ್ದ ಸಂಸ್ಕೃತಿಯೊಂದು ತನ್ನ ಅಸ್ತಿತ್ವವನ್ನು ಚಿತ್ರಿಸುತ್ತಲೇ ಅಮಾನ್ಯ ಮಾಡಿದ್ದ ಸಮಾಜಕ್ಕೆ ತನ್ನ ಬದುಕಿನ ಆನಾವರಣದ ಮೂಲಕವೇ ಪ್ರತಿರೋಧವನ್ನು ದಾಖಲು ಮಾಡುತ್ತದೆ. ದಲಿತ ಆತ್ಮಕಥೆಗಳು ಭಾರತೀಯರ ಬೌದ್ಧಿಕವಾದ ವಿಸ್ತಾರಕ್ಕಿಂತಲೂ ಸಾಂಸ್ಕೃತಿಕವಾದ ವಿಸ್ತಾರವನ್ನು ಮತ್ತು ಸಾಮಾಜಿಕವಾದ ಸಂವಾದವನ್ನು ಹುಟ್ಟುಹಾಕುತ್ತವೆ. ಶೋಷಿತ, ತುಳಿತಕ್ಕೊಳಗಾದ ದಮನಿತ, ಅಂಚಿಗೆ ತಳ್ಳಲ್ಪಟ್ಟ ಸಮುದಾಯಗಳ ಸಂವೇದನೆಯನ್ನು ಅರ್ಥೈಸವಲ್ಲಿ ಮತ್ತು ಈ ಸಮುದಾಯಗಳ ಬದುಕನ್ನು ಮುಖ್ಯನೆಲೆಗೆ ತರುವಲ್ಲಿ ಈ ದಲಿತ ಆತ್ಮಕತೆಗಳು ಹೊಸ ಸಾಧ್ಯತೆಗಳನ್ನು ಹುಟ್ಟು ಹಾಕಿದವು. ಶ್ರೀಮಂತವಾದ ಕನ್ನಡ ಸಾಹಿತ್ಯದಲ್ಲಿ ಸುಮಾರು 1970ರ ದಶಕದ ವರೆಗೂ ಒಂದು ಪ್ರಧಾನ ಧಾರೆಯ ವಿಷಯಗಳಷ್ಟೆ ವಿಜೃಂಭಿಸುತ್ತಿದ್ದು 1970ರ ದಶಕದಲ್ಲಿ ನಡೆದ ಬರಹಗಾರರ ಒಕ್ಕೂಟ ಚಳವಳಿ, ಜಾತಿವಿನಾಶ ಚಳವಳಿ, ಬಸವಲಿಂಗಪ್ಪನವರ ಬೂಸಾ ಪ್ರಕರಣ, ದಲಿತ ಸಂಘರ್ಷ ಸಮಿತಿಯ ಉದಯ ಹೀಗೆ ಆರಂಭವಾದ ಸಾಮಾಜಿಕ ಪರಿವರ್ತನಾ ಚಳವಳಿಗಳು ಸಾಹಿತ್ಯದ ದಿಕ್ಕನ್ನು ಬದಲಾಯಿಸಿದುವು. ಅಂಚಿಗೆ ತಳ್ಳಲ್ಪಟ್ಟ, ತಳ ಸಮುದಾಯಗಳು ಶೋಷಿತ ಸಮುದಾಯಗಳು ಸ್ತ್ರೀ ಸಂವೇದನೆಗಳು ಮುಖ್ಯವಾದ ಚರ್ಚೆಗೆ ಬರತೊಡಗಿದವು. ಇದುವರೆಗೂ ಸಾಹಿತ್ಯವೆಂದರೆ ದೇಶಪ್ರೇಮ, ಭಾವುಕತೆ, ಮನರಂಜನೆಯ, ಇತಿಹಾಸ ಪುರಾಣ, ಗತವೈಭವಗಳ ಚರ್ವಿತ ಚರ್ವಣವಾಗಿದ್ದು, ಮೊದಲಬಾರಿಗೆ ಸಾಹಿತ್ಯವೆಂಬುದು ಅಲಕ್ಷಿತ ಸಮುದಾಯಗಳ ಸಾಮಾಜಿಕತೆಗೆ ಕನ್ನಡಿಯಾಗತೊಡಗಿತು. ಮತ್ತು ಬೇರೆಬೇರೆ ಜ್ಞಾನಶಿಸ್ತುಗಳ ಮುಖಾಂತರ ಸಾಹಿತ್ಯದ ಚರ್ಚೆಗಳು ಸಾಗತೊಡಗಿದವು. ಅನ್ಯಜ್ಞಾನಶಿಸ್ತುಗಳು ಕನ್ನಡ ಸಾಹಿತ್ಯದೊಳಗೆ ಪ್ರವೇಶಿಸಿ ಸಾಹಿತ್ಯವೆಂದರೆ ಸಮಾಜದ ಪಾರದರ್ಶಕವಾದ ಕನ್ನಡಿಯಾಗತೊಡಗಿತು. ಸುಪ್ತವಾಗಿದ್ದ ಅನೇಕ ಭಾವನೆಗಳು, ತೆರೆಮರೆಯಲ್ಲಿದ್ದ ಅನೇಕ ಬದುಕುಗಳು, ಸಾಹಿತ್ಯಕ್ಕೆ ಸರಕಾಗಲಾರವು ಎಂದುಕೊಂಡಿದ್ದ ಮಹಿಳೆಯ ಬದುಕು, ದುಡಿವವರ, ಶೋಷಿತರ, ದಮನಿತರ, ದಲಿತರ ಅಳಲುಗಳು ಜೀವನ ವಿಕಾರಗಳೆಲ್ಲಾ ದನಿ ಪಡೆಯಲಾರಂಭಿಸಿದವು.

ಸಾಂಪ್ರಾದಾಯಿಕವಾಗಿ ಸಾಗಿ ಬಂದಿದ್ದ ಸಾಹಿತ್ಯದ ಬೇರು ಸಿಬಿರೊಡೆದು ಹಲವು ರೂಪಗಳನ್ನು ತಾಳಿತು. ಮತ್ತು ಸಾಹಿತ್ಯ ಅಭಿವ್ಯಕ್ತಿ ಶೈಲಿಗಳಲ್ಲೂ ಕ್ರಾಂತಿ ನಡೆದು ಹೊಸಹೊಸ ಸಾಹಿತ್ಯ ಪ್ರಕಾರಗಳು ಹುಟ್ಟಿಕೊಂಡವು ಹಾಗೆ ಹುಟ್ಟಿಕೊಂಡ

ಸಾಹಿತ್ಯ ಪ್ರಕಾರಗಳಲ್ಲಿ ಆತ್ಮಕತೆಯೂ ಕೂಡ ಒಂದು. ಅದರಲ್ಲೂ ಕನ್ನಡ ಸಾಹಿತ್ಯದಲ್ಲಿ ಹುಟ್ಟಿಕೊಂಡ ದಲಿತ ಆತ್ಮಕಥೆ ಪ್ರಕಾರವು ಬಹುಪಾಲು ಮರಾಠಿ ಆತ್ಮಕತೆಗಳಿಂದ ನೇರವಾದ ಪ್ರೇರಣೆ ಪಡೆದು ಬಂದಿತು. ಮರಾಠಿಯಲ್ಲಿ ಬಂದ ಉಚಲ್ಯಾ, ಗಭಾಳ, ಅಕ್ರಮಸಂತಾನ ಮುಂತಾದ ಆತ್ಮಕಥೆಗಳು ಇದುವರೆಗೂ ಮುಚ್ಚಿಟ್ಟಿದ್ದ ಮತ್ತು ಸಂಪ್ರದಾಯಸ್ಥ ಸಾಹಿತ್ಯವು ಮೈಲಿಗೆಯೆಂದು ಪರಿಭಾವಿಸಿದ್ದ ಅನೇಕ ಅನುಭವಗಳು, ಶಿಷ್ಟವಲ್ಲದ ತೀರಾ ತಾಜ ಆದ, ಅದರದೇ ಸಾಮಾಜಿಕ ಸಾಂಸ್ಕೃತಿಕ ಪರಿಸರದ ಭಾಷೆಯಲ್ಲಿ ಅಭಿವ್ಯಕ್ತಗೊಂಡಾಗ ಕನ್ನಡ ಸಾಹಿತ್ಯದ ಸಂಪ್ರದಾಯಸ್ಥ ಮನಸುಗಳು ಕಣ್ಣನ್ನು ಕಿರಿದುಗೊಳಿಸಿ ನೋಡುವಂತಾಯಿತು. ಹೀಗೆ ವ್ಯಕ್ತವಾದ ಹಸಿಹಸಿ ಭಾವನೆಗಳು ಓದುಗರ ಮೈರಕ್ತವನ್ನು ಬಿಸಿಯಾಗಿಸಿ, ಪರಿಚಲನೆಯಲ್ಲಿ ವೇಗವನ್ನು ತಂದವು. ಇದುವರೆಗೂ ಕನ್ನಡ ಸಾಹಿತ್ಯ ಕಂಡರಿಯದ, ಅನೂಹ್ಯವಾದ, ತೀರಾ ವಾಸ್ತವವಾದ ಜಗತ್ತನ್ನು ಬೆಳಕಿಗೆ ತರುವುದರ ಮೂಲಕ ಲೋಕ ಮೀಮಾಂಸೆಗೆ ಹೊಸ ಭಾಷ್ಯವನ್ನು ಬರೆದುವು

ಸಾಂಪ್ರದಾಯಿಕವಾದ ಆತ್ಮಕತೆಗಳನ್ನು ಹೇಳಿಕೊಳ್ಳುವಲ್ಲಿ ಅರಿವಿದ್ದೋ ಅರಿವಿಲ್ಲದೆಯೋ ಕಥನಗಾರರು ತಮ್ಮ ಸಾಧನೆಯನ್ನೋ ಸವಿಯಾದ ನೆನಪುಗಳನ್ನೋ ಹೇಳುವಾಗ ಸ್ವವಿಜೃಂಭಣೆಯಲ್ಲಿ ತೊಡಗಿಬಿಡುತ್ತಾರೆ. ಮತ್ತು ಸಮಾಜ ಸ್ವೀಕರಿಸಬಹುದಾದ ಮುಖವನ್ನು ಮಾತ್ರ ಪರಿಚಯಿಸಿಕೊಳ್ಳುತ್ತಾರೆ. ಆದರೆ ದಲಿತ ಆತ್ಮಕತೆಗಳು ಇದಕ್ಕೆ ವಿರುದ್ದವಾಗಿ ನಾಯಕ ಕೇಂದ್ರಿತವಾದ ನಿರೂಪಣೆಯನ್ನು ನಿರಾಕರಿಸಿ, ಸಮಾಜವು ಇದುವರೆಗೆ ದರ್ಶಿಸದ ಮತ್ತು ಸಾಹಿತ್ಯವು ಪರಿಚಯಿಸದ ಬದುಕಿನ ಬಹಳ ಮುಖ್ಯವಾದ ಭಾಗದ ಪುಟಗಳನ್ನು ತೆರೆದಿಟ್ಟವು, ಇದುವರೆಗಿನ ಆತ್ಮಕತೆಗಳ ಆತ್ಮರತಿಯ ವಿಕಾರವನ್ನು ಅನಾವರಣಗೊಳಿಸಿದುವು. ಇದನ್ನು ಆತ್ಮರತಿಯ ಭಂಜನವೆಂದೂ ಕರೆಯಬಹುದು. ಕನ್ನಡದಲ್ಲಿ ಬಂದ ದಲಿತ ಆತ್ಮಕಥೆಗಳು ಇದುವರೆಗೆ ಇದ್ದಂತಹ ರಂಜಿತವಾದ ಮತ್ತು ವೈಭವೋಪೇತವಾದ, ಆತ್ಮರತಿಯ ಆತ್ಮಕಥೆಗಳನ್ನು ಅಣಕಿಸಿದುವು. ದಲಿತೇತರರು ಬರೆದ ಆತ್ಮಕತೆಯ ಸನ್ನಿವೇಶಗಳು ಅವರಿಗೆ ಮಾತ್ರವೇ ಎಕ್ಸ್ಲೂಸೀವ್ ಆಗಿರುತ್ತವೆ ಆದರೆ ದಲಿತ ಆತ್ಮಕತೆಗಳು ಬರೆದ ಲೋಕ ವಿವರಣದಲ್ಲಿ ಎಲ್ಲ ದಲಿತನ ಬದುಕೂ ಒಳಗೊಳ್ಳುತ್ತವೆ. ಎಲ್ಲ ದಲಿತ ಆತ್ಮಕತೆಗಳೂ ಕೂಡ ಸಮಾನವಾದ ಅನೇಕ ಅಂಶಗಳನ್ನು ಒಳಗೊಂಡಿರುತ್ತವೆ. ಸಾಂಪ್ರದಾಯಿಕ ಆತ್ಮಕಥೆಗಳ ಮೂಲವಸ್ತು ನೆನಪು–ಸವಿನೆನಪುಗಳಾದರೆ, ದಲಿತ ಆತ್ಮಕತೆಗಳ ಮೂಲವಸ್ತು ಅದಮ್ಯವಾದ ಬಡತನ, ಅವಮಾನ, ಪ್ರತಿಷ್ಠಿತ ಸಮಾಜದಿಂದ ಅನುಭವಿಸಿದ ತಿರಸ್ಕಾರ, ತಮ್ಮ ನಿಕೃಷ್ಟವಾದ ಬದುಕಿನ ಬಗೆಗಿನ ಅಸಮಾಧಾನ, ಅಸಮಾನತೆಗಳೇ ಆಗಿವೆ. ಭಾವುಕವಾದ ಸನ್ನಿವೇಶಗಳನ್ನು ಛಿದ್ರಗೊಳಿಸಿ ಅಥವಾ ಅವುಗಳಿಗೆ ಬದಲಾಗಿ ವಾಸ್ತವವಾದ ಬದುಕಿನ ಕ್ರೂರತೆಗೆ ಕನ್ನಡಿಯಾದವು. ಯಾವುದು ಅವಮಾನ ಅಸಹ್ಯವೆನಿಸಿದ್ದವೋ ಅವುಗಳೇ ದಲಿತ ಆತ್ಮಕಥೆಗಳ ಮುಖ್ಯ ದನಿಯಾದವು. ದಲಿತೇತರ ಆತ್ಮಕಥೆಗಳಲ್ಲಿರುವ ಬಾಲ್ಯವು ಬಹುತೇಕ ಸಹ್ಯವೂ ಸುಂದರವೂ ರಸಮಯವೂ ಸವಿನೆನಪೂ ಆಗಿರುತ್ತದೆ ಅಥವಾ ಸುಂದರವಾದದ್ದು ಮಾತ್ರ ದಾಖಲಾಗುತ್ತದೆ. ದಲಿತ ಆತ್ಮಕಥೆಗಳಲ್ಲಿ ಇದಕ್ಕೆ ಹೊರತಾಗಿ ಸಹನೀಯವಾದ ಅಸಹನೀಯವಾದ ತಪ್ಪುಒಪ್ಪುಗಳೆಲ್ಲ ಇಲ್ಲಿ ಸ್ಥಾನವನ್ನು ಪಡೆಯುತ್ತವೆ. ತೀರಾ ಮುಜುಗರಕ್ಕೊಳಗಾಗಬಹುದಾದ ಸನ್ನಿವೇಶಗಳೂ ಕೂಡ ಮರೆಯದೆ ದಾಖಲಾಗುತ್ತವೆ.

ದಲಿತ ಆತ್ಮಕತೆಗಳು ಬದುಕಿನ ಗ್ರಹಿಕೆಯನ್ನು ಕುರಿತಂತೆ ತನ್ನಲ್ಲೇ ನಡೆಸುವ ಶೋಧಗಳಾಗಿವೆ, ಮತ್ತು ಸಮಾಜವು ತಮ್ಮನ್ನು ಗ್ರಹಿಸಿದ ಬಗೆಯನ್ನು ಅರ್ಥೈಸಿಕೊಳ್ಳಲು ಪ್ರಯತ್ನಿಸಿವೆ. ಈ ಆತ್ಮಕಥೆಗಳಲ್ಲಿ ಕಾಣುವ ಬದುಕು ಸಮಷ್ಟಿಯಿಂದ ಹೊರಗುಳಿದಂತೆ ನಾಗರಿಕ ಸಮಾಜದಿಂದ ಪ್ರತ್ಯೇಕಗೊಂಡಂತೆ ಪ್ರಧಾನವಾದ ಸಂಸ್ಕೃತಿಯಿಂದ ಭಿನ್ನವಾದಂತೆ ಕಂಡುಬರುತ್ತದೆ.

ತಾನು ಭಾಗವಾಗಿರುವ ಈ ಸಮಾಜಕ್ಕಿಂತಲೂ, ನಾನು ಅನುಭವಿಸುತ್ತಿರುವ ಸಮಾಜವು ತೀರಾ ಭಿನ್ನವಾದುದು ಎಂಬುದನ್ನು ಅರಿವಿಗೆ ತಂದುಕೊಳ್ಳುತ್ತವೆ. ಅನಾಥವಾದ ತನ್ನ ಭಾವಗಳನ್ನು ಪರಕೀಯವಾದ ತನ್ನ ಅಸ್ತಿತ್ವವನ್ನು ಸಮಾಜದ ಇತರ ಸಂಬಂಧಗಳೊಡನೆ ಒರೆಗೆ ಹಚ್ಚಿಕೊಂಡಂತಿವೆ. ಇತರ ಸದಸ್ಯರೊಂದಿಗೆ ತನಗಿರುವ ಸಮೂಹಗತಿಶೀಲತೆಯನ್ನು ಶೋಧಿಸಿಕೊಳ್ಳುತ್ತಾ ತನ್ನ ಇರುವಿಕೆಯನ್ನು ಸ್ಥಿರೀಕರಿಸಿಕೊಳ್ಳುತ್ತವೆ. ತಾನು ಬದುಕಿರುವ ಈ ಸಮಾಜವನ್ನು ಸಾಮಾಜಿಕವಾಗಿ ಮರು ರೂಪಿಸಿಕೊಳ್ಳುತ್ತವೆ. ಇಲ್ಲಿನ ವ್ಯಕ್ತಿ ಅನಾಥತೆಯನ್ನು ಹೇಳುತ್ತಲೆ ಸಮುದಾಯದ ಭಾಗವಾಗಲು ಅಥವಾ ನಾನೂ ಸಮುದಾಯದ ಭಾಗ ಎಂದು ಹೇಳಿಕೊಳ್ಳುವ ತಹತಹಿಯಲ್ಲಿ ತನ್ನ ಅಸ್ಥಿತ್ವವೇನು.? ಸ್ಥಾನಮಾನಗಳೇನು..? ಸಮಾಜದ ಗತಿಶೀಲತೆಯಲ್ಲಿ ತನ್ನ ಪಾತ್ರವೇನು ಎಂಬ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಹೃದಯ ಸಂವೇದಿ ಸಂಭಾಷಣೆಯಲ್ಲಿ ತೊಡಗಿವೆ.

ಇದುವರೆಗೆ ಇದ್ದ ಸಾಹಿತ್ಯ ಭಾಷೆಗೆ ಬದಲಾಗಿ ಹೊಸ ಭಾಷೆಯೊಂದನ್ನು ಒಗ್ಗಿಸಿಕೊಂಡರು. ತನ್ನ ಆದ್ರವಾದ ಅನುಭವದಿಂದ ಮತ್ತು ಅದುಮಿಡಲಾರದ ಸಂಕಟಗಳಿಂದ ತನ್ನ ಬದುಕಿನದೇ ಆದ ಭಾಷೆಯಿಂದ ಬಹಿಷ್ಕೃತ ಭಾರತದ ಇತಿಹಾಸವನ್ನು ಕಟ್ಟಬೇಕೆಂಬ ಛಲ ದಲಿತ ಆತ್ಮಕಥೆಗಳಲ್ಲಿ ಕಂಡುಬರುತ್ತದೆ. ಮತ್ತು ನಾನೂ ಈ ಸಮಾಜದ ಒಂದು ಭಾಗ ಎಂದು ನಿವೇದಿಸಿಕೊಳ್ಳುವ ತೀರಾ ಆಪ್ತವೆನಿಸಿದ ಕಥಾನಕಕ್ಕೆ ಹೃದಯಭಾಷೆಯ ನಿರೂಪಣೆಯಿದೆ. ಇಲ್ಲಿನ ಭಾಷೆಗೆ ತೀರಾ ಗ್ರಾಮ್ಯವೆನಿಸಿದ ನುಡಿಯ ಚುಂಗು ತಗುಲಿ ಪದಗಳೆಲ್ಲಾ ದಾರುಣತೆ ಬಡತನ, ಹಸಿವು, ಅಭದ್ರತೆ ಮತ್ತು ಅವಮಾನಗಳ ವ್ಯಾಕರಣ ಶಿಸ್ತಿಗೆ ಒಳಗಾಗಿ, ದಲಿತಹಟ್ಟಿಗಳ ಸಬುದಕುಲುಮೆಯಲ್ಲಿ ಪಳಗಿ ಭಾಷೆಯು ತನ್ನ ಹೊರಮೈಯನ್ನು ಬದಲಿಸಿಕೊಂಡಿತು.ದೇವನೂರರ ಕುಸುಮಬಾಲೆ ದಲಿತರ ಕುಕಥನವೂ ಆಗಿ ಭಾಷೆಯನ್ನು ಮೇಣದ ಹಾಗೆ ಬಳಸಿಕೊಂಡ ಪರಿ ದಲಿತ ಬರೆಹಗಳ ಭಾಷಾಬಳಕೆಗೆ ಹೊಸ ವ್ಯಾಕರಣವನ್ನು ಮತ್ತು ದಲಿತಲೋಕಕ್ಕೆ ಮೀಸಲಾಗುವ ಶಬ್ದಭಂಡಾರಗಳ ಅನಿವಾರ್ಯತೆಯನ್ನು ಹುಟ್ಟುಹಾಕಿತು. ಸಮುದಾಯದ ಭಾಗವಾಗಲು ಅಥವಾ ನಾನೂ ಸಮುದಾಯದ ಭಾಗ ಎಂದು ಹೇಳಿಕೊಳ್ಳುವ ಹೃದಯ ಭಾಷೆಯ ಕಥಾನಕ ಇದಾಗಿದೆ. ದಲಿತ ಆತ್ಮಕಥೆಗಳ ನಿರೂಪಣಾ ಶೈಲಿ ಯಾವುದೇ ತರಾತುರಿಯಿಲ್ಲದ, ಆತವಿಶ್ವಾಸದಿಂದ ಕೂಡಿ ನಿರಾಳವಾದುದಾಗಿದೆ.

ದಲಿತ ಆತ್ಮಕಥೆಗಳ ಒಳಗಿರುವ ಸೂಕ್ಷ್ಮವಾದ ಲೋಕದೃಷ್ಟಿಯು ಕಂಡೂ ಕಾಣದಂತಿರುವ ಸಮಾಜದ ಒಳಮೈಯನ್ನು ಸ್ಪರ್ಶಿಸುತ್ತವೆ. ದಲಿತವರ್ಗಕ್ಕೆ ಪ್ರತಿಷ್ಠಿತ ಸಮಾಜವು ತೋರಿದ ಅಸಮಾನತೆಯನ್ನು, ಪ್ರಧಾನ ಸಂಸ್ಕೃತಿಯು ತೋರಿದ ಪ್ರಜ್ಞಾಪೂರ್ವಕವಾದ ದಿವ್ಯ ನಿರ್ಲಕ್ಷಯವನ್ನು ನೇರವಾಗಿ ಖಂಡಿಸದೇ ಇದ್ದರೂ, ಕಥನದುದ್ದಕ್ಕೂ ಪ್ರತಿಭಟನೆಯ ದನಿ ಮಾತ್ರ ಗುಪ್ತಗಾಮಿನಿಯಾಗಿದೆ. ಒಳತೋಟಿಯನ್ನು ಹೇಳಿಕೊಳ್ಳುತ್ತಿರುವುದೇ ಒಂದು ರೀತಿಯ ಪ್ರತಿರೋಧವಾಗಿದೆ, ಶತಶತಮಾನಗಳಿಂದ ಅಕ್ಷರ ವಂಚಿತವಾಗಿದ್ದ ಸಮಾಜವೊಂದು ಪಡೆದ ಅಕ್ಷರ ಜ್ಞಾದ ಬಲದಿಂದ ಯಾರನ್ನೋ ಓಲೈಸುವ ಕಾರ್ಯಕ್ಕಿಳಿಯದೆ, ತನ್ನನ್ನೇ ತೆರೆದಿಟ್ಟುಕೊಳುವ ಮೂಲಕ ನಾಗರಿಕ ಸಮಾಜದ ಅನಾಗರಿಕತೆಯನ್ನು ಅನಾವರಣ ಮಾಡುವ ಮೂಲಕ ಪ್ರತಿರೋಧವನ್ನು ದಾಖಲಿಸಿತು.ದಲಿತರ ಬದುಕು ಸಮಾಜದಲ್ಲಿದ್ದ ಪ್ರತಿಷ್ಟಿತ ವರ್ಗದವರ ಹಿಡಿತಲ್ಲಿದ್ದುದನ್ನು ಹೇಳುತ್ತವೆ. ಇಲ್ಲಿ ಕಾಣುವ ತಾರತಮ್ಯ, ಅಸಹನೀಯವಾದ ಬದುಕು ಎದ್ದು ಕಾಣುವಂತೆ ತೋರುತ್ತಿರುವ ಅಸಾಮರಸ್ಯ ಇವೆಲ್ಲವೂ ಪ್ರಜ್ಞಾಪೂರ್ವಕವಾಗಿ ಅನಾವರಣಗೊಂಡಿವೆ. ಭಾರತೀಯ ಸಮಾಜದಲ್ಲಿ ನಾನೂ ಒಬ್ಬನಿದ್ದೇನೆ ಎಂದು ಪ್ರಜ್ಞಾಪೂರ್ವಕವಾಗಿ

ತನ್ನನ್ನು ತಾನು ರಚಿಸಿಕೊಳ್ಳುವ ಈ ಕಥನಗಳಲ್ಲಿ ಅನಾತತೆ ಮತ್ತು ಪರಕೀಯ ಪ್ರಜ್ಞೆ ಕಾಣುತ್ತದೆ. ತನ್ನನ್ನೂ ಒಬ್ಬ ಸದಸ್ಯನನ್ನಾಗಿ ನಡೆಸಿಕೊಳ್ಳದ ಸಮಾಜದ ಬಗ್ಗೆ ತೀವ್ರವಾದ ಅಸಮಾಧಾನವಿದೆ ಅದನ್ನು ಮುಕ್ತವಾಗಿ ಹೇಳಿಕೊಳ್ಳುವಲ್ಲಿಯೇ ಒಂದು ರೀತಿಯ ಪ್ರತಿರೋಧವಿದೆ.

ಅವಮಾನಗೊಂಡ ನೆನಪುಗಳೇ ದಲಿತ ಆತ್ಮಕತೆಗಳ ಮುಖ್ಯ ವಸ್ತುವಾಗಿ, ವರ್ತಮಾನದ ಬದುಕಿನಲ್ಲಿ ಭೂತವನ್ನು ಸ್ಮರುಸುತ್ತಾ ಭವಿಷ್ಯವನ್ನು ಕಟ್ಟಿಕೊಳ್ಳುವ ಪ್ರಕ್ರಿಯೆ ಈ ಕಥಾನಕಗಳಲ್ಲಿ ಕಂಡುಬರುತ್ತದೆ. ಭೂತ ವರ್ತಮಾನಗಳ ಬಲದಿಂದ ಭವಿಷ್ಯದ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಘರ್ಷಕ್ಕೆ ತಾತ್ವಿಕವಾದ ಭೂಮಿಕೆಯನ್ನು ಈ ದಲಿತ ಆತ್ಮಕಥೆಗಳು ನಿರ್ಮಾಣ ಮಾಡಿಕೊಂಡಿವೆ. ವಿಶೇಷವಾಗಿ ಭೂತದ ಅವಮಾನವೇ ಭವಿಷ್ಯದ ನಿರ್ಮಾಣದಲ್ಲಿ ನಿರ್ಣಾಯಕವಾದ ಪಾತ್ರವನ್ನು ವಹಿಸಿದೆ. ಕಳೆದಲ್ಲೇ ಹುಡುಕಿಕೊಳಬೇಕು ಸೋತಲ್ಲೇ ಗೆಲಬೇಕು ಎಂಭಂತೆ ಅವಮಾನವನ್ನೇ ಉಸಿರಾಡಿಕೊಂಡು ಭವಿಷ್ಯದ ಬದುಕಿನಲ್ಲಿ ಪ್ರಬಲ ಸ್ಪರ್ಧೆ ನೀಡುವ ಕಡೆ ಸಾಗುವ ಪ್ರಕ್ರಿಯೆ ದಲಿತ ಆತ್ಮಕತೆಗಳದಾಗಿದೆ. ಬದುಕನ್ನು ಬಲು ಉತ್ಸಾಹದಿಂದ ಎದುರುಗೊಂಡರೂ ಆಶಾದಾಯಕತೆಯು ಇಲ್ಲದೆ ಹೋದಂತೆ ಬದುಕನ್ನು ಅನಿವಾರ್ಯವಾಗಿ ಸವೆಸಿದಂತೆ ಕಾಣುತ್ತದೆ. ಭೂತ ವರ್ತಮಾನವನ್ನು ತೆರೆದಿಡುತ್ತಲೆ ಭವಿಷ್ಯಕ್ಕೆ ಮುಖಾಮುಖಿಯಾಗುತ್ತವೆ. ಬದುಕು ಮತ್ತು ಅವಮಾನ ಈ ಆತ್ಮಕಥೆಗಳಲ್ಲಿ ಅಭಿನ್ನ. ಭೂತದ ಅವಮಾನವು ವರ್ತಮಾನದ ಸ್ವಾಭಿಮಾನಕ್ಕೂ ಭವಿಷ್ಯದ ಕನಸುಗಾರಿಕೆಗೂ ಕಸುವನ್ನು ಒದಗಿಸಿದೆ. ಮತ್ತು ಭೂತದ ಅವಮಾನವು ವರ್ತಮಾನದಲ್ಲಿ ಪ್ರತಿಭಟನೆಯ ಅಭಿವ್ಯಕ್ತಿಯಾಗಿದೆ.

1970ರ ದಶಕದಲ್ಲಿ ಆರಂಭಗೊಂಡ ದಲಿತಸಾಹಿತ್ಯವು ಕಾವ್ಯಧಾರೆಯನ್ನೇ ಪ್ರಧಾನವಾಗಿಸಿಕೊಂಡರೂ ನಂತರದ ದಿನಗಳಲ್ಲಿ ಕಥನ ಶೈಲಿಯನ್ನು ಒಗ್ಗಿಸಿಕೊಂಡಿತು ಈಗಾಗಲೇ ಹೇಳಿರುವಂತೆ ಮರಾಠಿ ಆತ್ಮಕತೆಗಳು ಕನ್ನಡದಲ್ಲಿ ದಲಿತ ಆತ್ಮಕತೆಗಳ ಮೇಲೆ ನೇರವಾದ ಪ್ರಭಾವವನ್ನು ಬೀರಿದವು. ಈ ನಿಟ್ಟಿನಲ್ಲಿ ಸಿದ್ಧಲಿಂಗಯ್ಯನವರ ಊರುಕೇರಿ, ಅರವಿಂದ ಮಾಲಗತ್ತಿಯವರ ಗೌರ್ಮೆಂಟ್ ಬ್ರಾಹ್ಮಣ, ತುಮಾಡಿ ರಾಮಯ್ಯನವರು ಬರೆದ ಮಣೆಗಾರ, ಕನ್ನಡದಲ್ಲಿ ಬಂದ ಪ್ರಮುಖವಾದ ಆತ್ಮಕತೆಗಳು. ದಲಿತ ಸಮುದಾಯದ ಸಂಸ್ಕೃತಿಯನ್ನು ವಿವರವಾಗಿ ಪರಿಚಯಿಸಿದ ಇವು, ಏಕಕಾಲಕ್ಕೆ ದಲಿತ ಸಮುದಾಯದ ಕುಲಕಥನಗಳೂ ಆಗಿವೆ. ಇವುಗಳಲ್ಲಿ ಪ್ರಕಟವಾಗಿರುವ ದಲಿತರ ಬದುಕು, ದಲಿತೇತರರು ಚಿತ್ರಿಸಿದ ಬದುಕಿಗಿಂತಲೂ ಭಿನ್ನವಾಗಿ ತೀರಾ ವಾಸ್ತವಾದ ಮಾಸಕ್ಕೊಮ್ಮೆಯಾದರೂ ದೀಪ ಹೊತ್ತಿಸಿಕೊಳದ ದಲಿತವಾಸದ ಸೋಗೆ ಬಿಲಗಳನ್ನು ತೋರಿಸಿದುವು. ಅಸಹನೀಯವಾದ ಬದುಕನ್ನು ಆತ್ಮವಿಶ್ವಾಸದಿಂದ ಎದುರಿಸುತ್ತಾ, ಪ್ರತಿಷ್ಠಿತ ಸಮಾಜವು ಕೊಡಮಾಡಿದ ಅನಾಥ ಪ್ರಜ್ಞೆಯನ್ನೇ ಶಕ್ತಿಯನ್ನಾಗಿ ಮಾಡಿಕೊಂಡು, ಅವಮಾನದ ಬೆಂಕಿಯಲ್ಲಿ ಬೆಂದ ಮನಸ್ಸು, ಕುದಿವ ರಕ್ತದ ಮೂಲಕ ಹೊಸದಾದ ಲೋಕ ಮೀಮಾಂಸೆಯನ್ನು ಬರೆಯುತ್ತವೆ. ಸಮಾಜವೊಂದರ ಅಧ್ಯಯನಕ್ಕೆ ಸಿದ್ಧಮಾದರಿಯ ಸಾಂಪ್ರದಾಯಿಕ ಪರಿಕರಗಳ ಬದಲಿಗೆ ಹರಿತವಾದ ದೃಷ್ಟಿಕೋನವನ್ನು ಕೊಟ್ಟು ಸಮಾಜೋಸಾಂಸ್ಕೃತಿಕ ಅಧ್ಯಯನಕ್ಕೆ ಹೊಸದಾದ ಪ್ರವೇಶಗಳನ್ನು, ಹಲವಾರು ನಿರ್ಗಮನಗಳನ್ನು ನಿರ್ಮಿಸಿ ಅಜ್ಞಾತವಾಗಿ ಉಳಿದಿದ್ದ ಅಧೀನಸಂಸ್ಕೃತಿಯ ಕೌತುಕವನ್ನು ಪ್ರಧಾರೆಗೆ ತಂದವು.